ಫರವಾನಿಗೆ ನೀಡಿದ ಮೇಲೂ ಕರ್ನಾಟಕ ರಾಜ್ಯ ಸರ್ಕಾರದ ಧೋರಣೆ ನಿಲುಮೆ ಬಹಳ ಸ್ಪಷ್ಟವಾಗಿದೆ. ಈ ಬಗ್ಗೆ ಕೇಂದ್ರದ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ. ನಮ್ಮಲ್ಲಿ ನೊಂದವರು ಯಾರಿದ್ದಾರೆ ಅವರಿಗೆ ಪರಿಹಾರ ಸಿಗುವವರೆಗೂ ದಯಮಾಡಿ ಈ ಸೀರಿಯಲ್‌ನ್ನು ಟೆಲಿಕ್ಯಾಸ್ಟ್ ಮಾಡುವುದಕ್ಕೆ ಬಿಡಬೇಡಿ ಎಂದು ಸ್ಪಷ್ಟವಾಗಿ ಅವರಿಗೆ ನಾನು ಹೇಳುತ್ತೇನೆ.

೨. ನಂಜನಗೂಡು ತಾಲ್ಲೂಕ್ ಹಾಗೂ ಸುತ್ತಮುಂತ್ತ ಪ್ರದೇಶಗಳಲ್ಲಿ ಆನೆಗಳ ಕಾಟದಿಂದ ತೊಂದರೆ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ ನಂಜನಗೂಡು ತಾಲ್ಲೂಕು ಹಾಗೂ ಸುತ್ತಮುಂತ್ತಲಿನ ಪ್ರದೇಶಗಳಲ್ಲಿ ಆನೆಗಳ ಕಾಟದಿಂದ ಪ್ರಾಣಹಾನಿ ಹಾಗೂ ಬೆಳೆಗಳು ನಷ್ಟವಾಗಿರುವ ಬಗ್ಗೆ ಮಾನ್ಯ ವ್ಯವಸಾಯ ತೋಟಗಾರಿಕೆ ಶಿಕ್ಷಣ ಮತ್ತು ಅರಣ್ಯ ಸಚಿವರ ಗಮನ ಸೆಳೆಯುತ್ತೇನೆ.—

(ಅಧ್ಯಕ್ಷ ಪೀಠದಲ್ಲಿ ಶ್ರೀ ರಾಜೂಗೌಡರು ಉಪಸ್ಥಿತರಿದ್ದರು)

ಶ್ರೀ ಕೆ. ಹೆಚ್. ರಂಗನಾಥ್ (ಮಾನ್ಯ ಅರಣ್ಯ, ಶಿಕ್ಷಣ ವ್ಯವಸಾಯ ಹಾಗೂ ತೋಟಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕ್ ಹಾಗೂ ಸುತ್ತಮುಂತ್ತಲಿನ ಪ್ರದೇಶಗಳಲ್ಲಿ ಆನೆಗಳ ಕಾಟದಿಂದ ಪ್ರಾಣ ಹಾನಿ ಹಾಗೂ ಬೆಳೆಗಳಿಗೆ ಉಂಟಾಗಿರುವ ನಷ್ಟಕ್ಕೆ ಸಂಬಂಧಿಸಿದಂತೆ, ಆನೆಯ ಹಾವಳಿ ಜಾಸ್ತಿಯಾದಂತಹ ಪ್ರದೇಶದಲ್ಲಿ ವಾಚರ್‌ಗಳನ್ನು ನೇಮಿಸಲಾಗಿದೆ. ಆನೆಗಳು ರೈತರ ಜಮೀನಿಗೆ ಹೋಗಿ ಫಸಲು ನಷ್ಟ ಮಾಡುತ್ತಿರುವ ಸಂದರ್ಭಗಳಲ್ಲಿ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಅವುಗಳನ್ನು ರೈತರ ಜಮೀನಿನಿಂದ ಕಾಡಿಗೆ ಓಡಿಸುವ ಕ್ರಮ ಕೈಗೊಂಡಿರುತ್ತದೆ. ಹಾಗೂ ನಂಜನಗೂಡು, ಹೆಡಿಯಾಲ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಆನೆ ಕಂದಕಗಳನ್ನು ತೋಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ನಂಜನಗೂಡು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಈ ಕೆಳಕಂಡಂತೆ ನಷ್ಟ ಉಂಟಾಗಿರುತ್ತದೆ.

ವರ್ಷ	ಫಸಲು ನಷ್ಟ ಪ್ರಕರಣ	ಪರಿಹಾರ	ಪ್ರಕರಣಗಳು	ಜಾನುವಾರು ನಷ್ಟ	ಪ್ರಕರಣಗಳು	ಮಾನವ ಪ್ರಾಣಹಾನಿ
		ರೂ.		ರೂ.		ರೂ.
೧೯೮೬–೮೭	೪೦	೨೪,೮೮೫–೦೦	೧	೩೦೦–೦೦	೨	೧೦,೦೦೦–೦೦
೧೯೮೭–೮೮	೧೧	೪,೫೪೫–೦೦	೫	೨೫೨೫–೦೦		–ಇಲ್ಲ–
೧೯೮೮–೮೯	೭೧	೪೫,೮೩೩–೦೦	೩	೧೮೦೦–೦೦	೨	೨೦,೦೦೦–೦೦
೧೯೮೯–೯೦	೧೦	೨,೯೯೭–೦೦	೪	೧೦೦೦–೦೦	೨	೧,೫೦೦–೦೦

ಫಸಲು ನಷ್ಟಕ್ಕೆ ಪರಿಹಾರವನ್ನು ಸಂಬಂಧಪಟ್ಟ ಜಮೀನಿನ ಮಾಲೀಕರಿಂದ ದಾಖಲೆಗಳನ್ನು ತರಿಸಿಕೊಂಡು ಪರಿಶೀಲಿಸಿ ನಂತರ ಪರಿಹಾರ ನೀಡಲಾಗುವುದು.

† ಶ್ರೀ ಎ. ಮಹಮ್ಮದ್.— ಸ್ವಾಮಿ, ಈ ಕಾಡಿನಿಂದ ಬರತಕ್ಕಂಥ ಆನೆಗಳ ಕಾಟ ಬರೀ ನಂಜನಗೂಡು ತಾಲ್ಲೂಕಿಗೆ ಮಾತ್ರ ಅಲ್ಲ, ಆ ತಾಲ್ಲೂಕಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾತ್ರವಲ್ಲ, ಕಾಡಿನ ಪ್ರದೇಶಗಳು ಇರುವಂಥ ಎಲ್ಲಾ ಗ್ರಾಮಗಳಲ್ಲೂ ಇವುಗಳ ಕಾಟ ಇರುತ್ತದೆ. ಈ ಆನೆಗಳ ಕಾಟ ತಪ್ಪಿಸಬೇಕೆಂದು ಈ ಹಿಂದೆ ಅನೇಕ ಸಾರಿ ಚಳುವಳಿಗಳನ್ನು ಮಾಡಿ, ಸತ್ಯಾಗ್ರಹಗಳನ್ನು ಮಾಡಿ ಅನೇಕ ಸಂಘಸಂಸ್ಥೆಗಳನ್ನು ಸರ್ಕಾರದ ಗಮನಕ್ಕೆ ತಂದಾಗ, ಟ್ರಂಚ್‌ಗಳನ್ನು ಹೊಡೆಸಲಿಕ್ಕೆ, ತಂತಿ ಬೇಲಿ ಹಾಕಿಸುವುದಕ್ಕೆ ಹಣ ಮಂಜೂರಾಗಿತ್ತು. ಈ ಕೆಲಸ ಸ್ವಲ್ಪ ಕಾಲ ನಡೆದು ನಂತರ ನಿಂತುಹೋಯಿತು. ಕೆಲವು ಸಾರಿ ಈ ರೀತಿ ತೋಡಿದಂಥ ಟ್ರಂಚ್‌ಗಳನ್ನು ಸಪಾ ಆನೆಗಳು ದಾಟಿಕೊಂಡು ಕಾಡಿನ ಪ್ರದೇಶದ ಅಂಚಿನಲ್ಲಿರತಕ್ಕ ಹಳ್ಳಿಗಳಕಡೆ ಬಂದು ರೈತರುಗಳು ಬೆಳೆದಿರತಕ್ಕ ಫಸಲುಗಳನ್ನೆಲ್ಲಾ ಸಾಕಷ್ಟು ಪ್ರಮಾಣದಲ್ಲಿ ನಾಶ ಮಾಡಿವೆ. ಇದರಲ್ಲಿ ದೊಡ್ಡ ಸಮಸ್ಯೆ ಏನೆಂದರೆ, ಕಾಡಿನ ಪ್ರದೇಶಗಳ ಅಂಚಿನ ಹಳ್ಳಿಗಳಲ್ಲಿ ಇರುವ ರೈತರುಗಳು ಬಹಳ ಕಡು ಬಡವರು. ಮಳೆ ಆಶ್ರಯದಿಂದ ಮಾತ್ರ ಬೆಳೆಗಳನ್ನು ಬೆಳೆದು

ಜೀವನ ಮಾಡತಕ್ಕಂಥ ರೈತರುಗಳು ಇವರು, ಈ ರೀತಿ ಕಷ್ಟಪಟ್ಟು ವರ್ಷವೆಲ್ಲಾ ದುಡಿದು ಬೆಳೆಸಿದ ಫಸಲುಗಳನ್ನು ಒಂದೇಸಾರಿ ಆನೆಗಳು ನಾಶ ಮಾಡಿದರೆ ಇಡೀ ವರ್ಷ ರೈತರುಗಳು ಬಹಳ ಕಷ್ಟಪಡ ಬೇಕಾಗುತ್ತದೆ. ಇದರ ಜೊತೆಗೆ ಹೊಲಗಳನ್ನು ಕಾಯುವುದಕ್ಕೆ ಹೋಗುವ ರೈತರುಗಳ ಪ್ರಾಣ ಹಾನಿಯೂ ಆಗುತ್ತದೆ. ಆ ಕಡೆ ವಾಸ ಮಾಡುವ ರೈತರುಗಳು ಆರ್. ಸಿ. ಸಿ. ಮನೆಯಲ್ಲಿ ವಾಸ ಮಾಡತಕ್ಕವರಲ್ಲ. ಎಲ್ಲರೂ ಆರ್ಥಿಕವಾಗಿ ಹಿಂದುಳಿದಿರುವವರೇ ಆಗಿದ್ದಾರೆ. ಆರ್ಥಿಕವಾಗಿ ಚೆನ್ನಾಗಿರತಕ್ಕಂಥವರು ಯಾರೂ ಹೊಲ ಕಾಯುವುದಕ್ಕೆ ಹೋಗುವುದಿಲ್ಲ. ಅಲ್ಲಿ ವಾಸ ಮಾಡ ತಕ್ಕವರೆಲ್ಲಾ ಸಣ್ಣ ರೈತರು, ಅತಿ ಸಣ್ಣ ರೈತರು ಹಾಗೂ ನಿರ್ಗತಿಕರೇ ಆಗಿರುತ್ತಾರೆ. ಇಂಥವರುಗಳ ಫಸಲು ನಷ್ಟವಾಯಿತೆಂದರೆ ಅವರು ಬದುಕುವುದು ಹೇಗೆ ? ಯಾರು ಫಸಲುಗಳನ್ನು ಕಳೆದು ಕೊಂಡಿರುತ್ತಾರೋ ಅಂಥವರುಗಳಿಗೆ ತಕ್ಷಣ ಪರಿಹಾರ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ನಾನು ಪ್ರವಾಸ ಹೋಗಿದ್ದ ಸಂದರ್ಭದಲ್ಲಿ ಹಾಗೂ ಚುನಾವಣೆ ಕಾಲದಲ್ಲಿ ಹಳ್ಳಿಗಳಿಗೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿನ ಬಡ ರೈತರುಗಳೆಲ್ಲಾ ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಫಸಲು ನಷ್ಟವಾದ ರೈತರುಗಳಿಗೆ ಆರ್. ಬಿ. ಸಿ. ತೆಗೆದುಕೊಂಡು ಬಾ, ಅದು ತೆಗೆದುಕೊಂಡು ಬಾ ಇದು ತೆಗೆದುಕೊಂಡು ಬಾ ಎಂದೆಲ್ಲಾ ಅಧಿಕಾರಿಗಳು ನೆಪಗಳನ್ನು ಹೇಳಿ ಪರಿಹಾರ ಕೊಡುವುದನ್ನು ವಿಳಂಬ ಮಾಡುತ್ತಾರೆ. ಕೊಟ್ಟ ಪರಿಹಾರವೂ ಸಹ ಕಡಿಮೆ ಇರುವುದರಿಂದ ಅದು ಸಾಕಾಗುವುದಿಲ್ಲವೆಂದು ಹೇಳಿದ್ದಾರೆ. ಕೆಲವು ಸಾರಿ ತಹಶೀಲ್ದಾರ್‌ಗಳು ಡಿ. ಎಫ್. ಓ. ಅವರನ್ನು ನೋಡು, ರೇಂಜರ್ ಅವರನ್ನು ನೋಡು ಎಂದು ಹೇಳುತ್ತಾರೆ ಈ ರೀತಿಯಲ್ಲಿ ರೈತರುಗಳನ್ನು ಸುತ್ತಾಡಿಸುವುದರಿಂದಲೇ ಅವರು ಸುಸ್ತಾಗುತ್ತಾರೆ. ಕಾಡು ಇರುವ ಅಂಚಿನಲ್ಲಿರುವ ಹಳ್ಳಿಗಳ ರೈತರುಗಳು ಅಸಹಾಯಕ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿ ಕೊಂಡಿದ್ದಾರೆ. ಕಾಡಾನೆಗಳಿಂದ ರೈತರುಗಳಿಗೆ ರಕ್ಷಣೆ ಕೊಡುವುದಕ್ಕಾಗಿ ಆನೆಗಳನ್ನು ಓಡಿಸುವ ಕೆಲಸಕ್ಕಾಗಿ ವಾಚ್‌ಮನ್‌ಗಳನ್ನು ನೇಮಿಸಿದ್ದೇವೆ ಎಲ್ಲಾ ರೀತಿಯ ರಕ್ಷಣಾ ಸಿಬ್ಬಂದಿ ವರ್ಗವನ್ನು ನೇಮಕ ಮಾಡಲಾಗಿದೆಯೆಂದು ತಿಳಿಸಿದ್ದೀರಿ. ಆದರೂ ಕಾಡಾನೆಗಳ ಕಾಟದಿಂದ ರೈತರುಗಳಿಗೆ ರಕ್ಷಣೆ ಇನ್ನೂ ಸಿಕ್ಕಿಲ್ಲ. ಸೂಕ್ತ ರಕ್ಷಣೆಯನ್ನು ಕೊಡುವುದಕ್ಕೆ ನಿಮ್ಮ ಸಿಬ್ಬಂದಿಯವರ ಕೈಯಲ್ಲಿ ಆಗುತ್ತಿಲ್ಲ. ಮಂತ್ರೆ ಆನೆಗಳು ಊರುಗಳ ಕಡೆ ಏಕೆ ಬರುತ್ತವೆಂದು ಕಾಡಿನಲ್ಲಿ ಆನೆಗಳಿಗೆ ಬೇಕಾದ ಮೇವು ಸಿಕ್ಕುತ್ತಿಲ್ಲ ಕಾಡಿನ ತುಂಬಾ ನೀಲಗಿರಿ ಮರಗಳನ್ನು ತಂದು ಬೆಳೆಸಿದ್ದೀರಿ. ಆನೆಗಳ ಮೇವು ಬೆಳೆಯತಕ್ಕಂಥ ಜಾಗಗಳಲ್ಲೆಲ್ಲಾ ನೀಲಗಿರಿ ಮರಗಳನ್ನು ಬೆಳೆಸಿರುವುದರಿಂದ ಅವುಗಳಿಗೆ ಮೇವು ಸಿಗದೆ ಊರ ಕಡೆಗೆ ಬರುತ್ತವೆ. ಯಾವಾಗ ನೀವು ನೀಲಗಿರಿ ಮರಗಳನ್ನು ಬೆಳೆಸಿ ಆನೆಗಳಿಗೆ ಬೇಕಾದ ಸೊಪ್ಪಿನ ಮರ ಗಳನ್ನು ಬೆಳೆಸಲಿಲ್ಲವೋ ಆಗ ನ್ಯಾಚುರಲ್ ಆಗಿ ಗ್ರಾಮ ಪ್ರದೇಶಗಳಿಗೆ ಆನೆಗಳು ನುಗ್ಗುತ್ತವೆ. ಸರ್ಕಾರ ಇವರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು. ಆಮೇಲೆ, ಯಾರಾದರೂ ಒಬ್ಬರು ಆನೆಯ ತುಳಿತಕ್ಕೆ ಸಿಕ್ಕಿ ಸತ್ತರೆ ಅವರ ಕುಟುಂಬ ವರ್ಗದವರಿಗೆ ೫ ಸಾವಿರದಿಂದ ೧೦ ಸಾವಿರ ರೂಪಾಯಿಗಳವರೆಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ. ಈ ೫ ಸಾವಿರ ೧೦ ಸಾವಿರ ರೂಪಾಯಿಗಳಿಂದ ಏನೂ ಆಗುವುದಿಲ್ಲ. ಕೆ. ಎಸ್. ಆರ್. ಟಿ. ಸಿ. ಹಾಗೂ ಇತರೆ ಆಕ್ಸಿಡೆಂಟ್‌ಗಳಲ್ಲಿ ಯಾರಾದರೂ ಸತ್ತರೆ ಅಂಥವರುಗಳಿಗೆ ೨೦ ಸಾವಿರ ರೂಪಾಯಿಗಳನ್ನು ಕೊಡುತ್ತೀರಿ. ಆದ್ದರಿಂದ ಇನ್ನೂ ಮುಂದೆ ಆನೆಗಳ ತುಳಿತಕ್ಕೆ ಒಳಗಾಗಿ ಸತ್ತ ಕುಟುಂಬ ವರ್ಗದವರಿಗೆ ೨೦ ಸಾವಿರ ರೂಪಾಯಿ ಗಳನ್ನಾದರೂ ಸರ್ಕಾರ ಕೊಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ನಾನು ಸ್ಪಷ್ಟೀಕರಣವನ್ನು ಕೇಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ — ಮಾನ್ಯ ಅಧ್ಯಕ್ಷರೆ, ನಾವುಗಳು ಈಗ ಇಲ್ಲಿ ಆನೆಗಳ ಕಾಟದ ಬಗ್ಗೆ ಮಾತನಾಡುತ್ತಾ ಇದ್ದೇವೆ. ಈ ಅರಣ್ಯ ಪ್ರದೇಶಗಳ ಬಳಿ ಹಲವಾರು ವರ್ಷಗಳಿಂದ ಆನೆಗಳ ಕಾಟ ಹೆಚ್ಚುತ್ತಾ ಇದೆ. ಇದಕ್ಕೆ ಮುಖ್ಯ ಕಾರಣ ಏನು ಎಂದು ಈ ಹಿಂದೆ ಇದ್ದ ಯಾವುದೇ ಸರಕಾರಗಳು ಆಲೋಚನೆ ಮಾಡಿಲ್ಲ. ಆನೆಗಳ ಕಾಟಕ್ಕೂ ಮತ್ತು ನಾವು ಇತ್ತೀಚೆಗೆ ಅನುಸರಿಸುತ್ತಿರುವ ಸಾಮಾಜಿಕ ಅರಣ್ಯೀಕರಣಕ್ಕೂ ನೇರವಾದ ಸಂಬಂಧ ಇದೆ. ನಾನೂ ಕೂಡ ನಂಜನಗೂಡಿನ ಹತ್ತಿರದ ಪ್ರದೇಶದಲ್ಲಿ ವ್ಯವಸಾಯ ಮಾಡಿಕೊಂಡಿರುವ ಕಾರಣ ನನ್ನ ಅನುಭವಕ್ಕೂ ಈ ವಿಚಾರ ಬಂದಿದೆ. ಈ ಆನೆಗಳು ತಮಗೆ ಬೇಕಾದ ಆಹಾರ ಮಂತ್ರು ನೀರಿಗೋಸ್ಕರ ಅದನ್ನು ಹುಡುಕುತ್ತಾ ಬರುತ್ತವೆ. ನಮ್ಮಲ್ಲಿರುವ ನೈಸರ್ಗಿಕ ಅರಣ್ಯ ನಾಶವನ್ನು ನಾವು ಯಾವಾಗಿನಿಂದ ಪ್ರಾರಂಭ ಮಾಡಿದ್ದೇವೋ ಅಂದಿನಿಂದ ಅವುಗಳಿಗೆ ನೈಸರ್ಗಿಕವಾಗಿ ಸಿಗುತ್ತಿದ್ದ ನೀರು, ಆಹಾರ, ಸಿಗದಾಯಿತು. ಹೀಗಾಗಿ ಬದುಕಿಗೋಸ್ಕರ ಆಹಾರ ಮತ್ತು ನೀರನ್ನು ಅನ್ವೇಷಿಸುತ್ತಾ ಅವುಗಳು ಊರ ಕಡೆಗೆ ಬರಲಾರಂಭಿಸಿವೆ. ಕೇವಲ ಆನೆಗಳದ್ದು ಮಾತ್ರ ಈ ವಿಚಾರ ಅಲ್ಲ. ಕೋತಿಗಳು ಇತರ ಕೆಲವು ಪ್ರಾಣಿಗಳು ಕೂಡ ಇವೊತ್ತು ಕಾಡುಬಿಟ್ಟು ಊರ ಕಡೆಗೆ ಬರಲೇ ಬೇಕಾಗಿದೆ. ಹೀಗಾಗಿ ನಾವು ನಾಶಪಡಿಸಿ, ಈಗ ಪುನಃ

ಬೆಳೆಸುತ್ತಿರುವ ಸಾಮಾಜಿಕ ಅರಣ್ಯ ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಎಲ್ಲಿಯ ತನಕ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆಗೆ ಪರಿಹಾರ ಕಷ್ಟ ಎಂದು ಕಾಣುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.— ನಮ್ಮ ಹೆಗ್ಗಡದೇವನ ಕೋಟೆ ಪ್ರದೇಶದಲ್ಲಿ ಮೊದಲು ಕಾವಲುಗಾರರು ಇದ್ದರು; ಈಗ ಇಲ್ಲ. ಹೀಗಾಗಿ ಕಾವಲುಗಾರರು ಇಲ್ಲದೆ ಪ್ರಾಣಿಗಳು ಬೆಳೆ ನಾಶ ಪಡಿಸುವ ಸಂದರ್ಭ ಬಂದಿದೆ. ತಯಮಿಟ್ಟು ಕಾವಲುಗಾರರನ್ನು ನೇಮಿಸುವ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕು.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಆನೆಗಳ ಕಾಟ ಕೆಲವು ಪ್ರದೇಶಗಳಲ್ಲಿ ಜಾಸ್ತಿಯಾಗಿದೆ ಮತ್ತು ನನಗೂ ಕೂಡ ಆ ಬಗ್ಗೆ ಅರ್ಜಿಗಳು ಸಂಬಂಧಪಟ್ಟ ವರಿಂದ ಬರುತ್ತಿವೆ. ಮಾನ್ಯ ಸದಸ್ಯರಾದ ಪ್ರೊ॥ ನಂಜುಂಡಸ್ವಾಮಿಯವರು ಈ ಕಂರಿತು ಹೇಳಿದ ವಿಚಾರದಲ್ಲಿ ವಾಸ್ತವಾಂಶ ಇದೆ. ಈ ಆನೆಗಳು ಓಡಾಡುತ್ತಾ ಇದ್ದ ಟ್ರ್ಯಾಕ್ ಏನಿತ್ತು ಅದು ಹೋಗಿ ರುವುದರಿಂದ ಈ ಪರಿಸ್ಥಿತಿ ಬಂದಿದೆ. ಕಾಶಾಲ ನಗರ ಆಗಲಿ, ಹೆಗ್ಗಡದೇವನ ಕೋಟೆಯಾಗಿರಲಿ, ಇಂಥ ಯಾವುದೇ ಪ್ರದೇಶಗಳ ಮಧ್ಯೆ ನಾವು ವಿವಿಧ ಕಾರಣಗಳಿಗಾಗಿ ಅರಣ್ಯವನ್ನು ನಾಶಪಡಿಸಿ ಅಲ್ಲಿ ಅಣೆಕಟ್ಟು ಕಟ್ಟಿದುದರಿಂದ, ಭೂಮಿಯನ್ನು ವ್ಯವಸಾಯಕ್ಕೆ ಕೊಟ್ಟಿರುವುದರಿಂದ ಈ ಸಮಸ್ಯೆಗೆ ಕಾರಣವಾಗಿದೆ ಆನೆಗಳು ಓಡಾಡುತ್ತಿದ್ದ ಪ್ರದೇಶಗಳಲ್ಲಿ ನಾವು ಅಭಿವೃದ್ಧಿ ಯೋಜನೆಗಳಿಗಾಗಿ ಅರಣ್ಯ ವನ್ನು ತೆಗೆದುಬೀಡಬೇಕಾದ ಪ್ರಸಂಗವೂ ಬಂದಿದೆ. ನಂಗು ಜಲಾಶಯ, ಹಾರಂಗಿ ಯೋಜನೆಗಳೇ ಮುಂತಾಗಿ ಅನೇಕ ಯೋಜನೆಗಳನ್ನು ಮಾಡಿಕೊಂಡಿದ್ದೇವೆ. ಹೀಗಾಗಿ ಅವುಗಳ ದಾರಿಗೆ ಅಡ್ಡ ಬಂದಂತಾಗಿದೆ. ಸರಕಾರವೇ ಈ ಆನೆಗಳ ಕಾಟವನ್ನು ತಡೆಗಟ್ಟುವುದು ಕಷ್ಟದ ಕೆಲಸ. ಆನೆಗೆ ಚಡ್ಡಿ ಹೊಲಿಸುವುದು ಸಾಧ್ಯವೇ ? ಅಂತೆಯೇ ಟ್ರೆಂಚ್ ಹೊಡೆಸುವುದು ಬಹಳ ವೆಚ್ಚದ ಮತ್ತು ದುಬಾರಿ ಕೆಲಸವಾಗುತ್ತದೆ. ಈಗ ಇದ್ದ ಪರಿಸ್ಥಿತಿಯಲ್ಲಿ ನಾವುಗಳು ಏನು ಮಾಡಬಹುದೆಂದು ವಿಚಾರ ಮಾಡಿ ಸ್ವಲ್ಪ ಸಹಾಯ ಮಾಡಬಹುದೇ ವಿನಹ ಇದಕ್ಕೆಲ್ಲಾ ಕಾರ್ಯಕ್ರಯವಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆಗಳನ್ನು ಕೊಟ್ಟರೆ ಅದು ತಪ್ಪಾಗುತ್ತದೆ. ನೈಸರ್ಗಿಕ ಅರಣ್ಯ ಸಂಪತ್ತನ್ನು ಉಳಿಸು ವುದಕ್ಕೆ ಮತ್ತು ಅರಣ್ಯೀಕರಣ ಕಾರ್ಯಕ್ರಮದ ಬಗ್ಗೆ ಸೂಕ್ತ ವಿಚಾರ ಮಾಡುತ್ತೇವೆ. ಪಶ್ಚಿಮ ಘಟ್ಟ ಯೋಜನೆಯಡಿಯಲ್ಲಿ ಸೋಶಿಯಲ್ ಫಾರೆಸ್ಟರಿ ವಿಚಾರದಲ್ಲಿ ಯಾವ ರೀತಿ ಕ್ರಮ ಕೈಗೊಳ್ಳ ಬೇಕೆಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಕಾಡು ಪ್ರಾಣಿಗಳ ಬದುಕಿಗೆ ಭಂಗ ಬಂದಿರುವುದರಿಂದಲೇ ಅವುಗಳು ಊರುಗಳ ಕಡೆಗೆ ಬರಲು ಪ್ರಾರಂಭಿಸಿವೆ. ಜಾನುವಾರುಗಳಿಂದಾದ ನಷ್ಟದ ಪ್ರಕರಣಗಳನ್ನು ನೋಡಿದರೆ ಅದರ ಸಂಖ್ಯೆಯು ಕಡಿಮೆ ಇದೆ. ಇಂಥ ಸಂದರ್ಭದಲ್ಲಿ ಫಸಲು ನಷ್ಟ ಆಗುತ್ತದೆ. ನಾವು ಅರಣ್ಯ ಪ್ರದೇಶದಲ್ಲಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದವರಿಗೆ ಭೂಮಿ ಕೊಡುವ ಕಾರ್ಯ ಕ್ರಮದಲ್ಲಿ ಭೂಮಿ ಪಡಕೊಂಡವರು ಅಲ್ಲಿ ಗದ್ದೆ ಬೇಸಾಯ ಮಾಡಿಕೊಂಡು ಬಂದಿದ್ದಾರೆ. ಕಬ್ಬು ಮುಂತಾಗಿ ಫಸಲು ಬೆಳೆಯುತ್ತಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡಾಗ ಈ ಆನೆಗಳ ಹಾವಳಿ ಯನ್ನು ತಡೆಗಟ್ಟುವ ಕ್ರಮದ ಬಗ್ಗೆ ವಿಚಾರ ಸಾಧ್ಯವೆ ಎಂದು ನೋಡಿ ? ಮಾನ್ಯ ಸದಸ್ಯರಾದ ಮಹದೇವ್‌ರವರು ಹೇಳಿದಂತೆ ಪ್ರಾಣಿಗಳಿಂದ ಮರಣಕ್ಕೊಳಗಾದವರ ಕುಟುಂಬದವರಿಗೆ ಕೊಡುವ ಪರಿಹಾರದ ಹೆಚ್ಚಳದ ಬಗ್ಗೆ ಪರಿಶೀಲನೆ ಮಾಡಬಹುದು. ಅಂತೆಯೇ ಪರಿಹಾರ ತೆಗೆದುಕೊಳ್ಳುವವರು ಅದಕ್ಕಾಗಿ ಅಲೆದಾಡುವುದನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದು ಕೊಳ್ಳೋಣ. ಇದರಿಂದ ಸಂತ್ರಸ್ತರಿಗೆ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರಾದ ವೆಂಕಟೇಶ್ ರವರಂ ಹೇಳಿದ ಹಾಗೆ ಹಂಗಾಮಿ ವಾಚರ್ಸ್‌ನ್ನು ಹಾಕಿದ ಮಾತ್ರಕ್ಕೆ ಆನೆಗಳ ಹಾವಳಿ ಕಡಿಮೆಯಾಗುವುದಿಲ್ಲ ಕಳ್ಳಸಾಗಾಣಿಕೆದಾರರನ್ನು ತಡೆಗಟ್ಟಲಂ ನಮ್ಮಲ್ಲಿ ಆಧುನಿಕ ಗನ್‌ಗಳು ಇಲ್ಲದ ಸಂದರ್ಭದಲ್ಲಿ, ವಾಚರ್‌ಗಳ ಕೈಯಲ್ಲಿ ಗನ್‌ಕೊಟ್ಟು ನಿಲ್ಲಿಸುವುದು ಎಷ್ಟು ಸಾಧ್ಯ ?

ಶ್ರೀ ಎಂ. ಮಹದೇವ್.— ಆನೆಗಳ ಹಾವಳಿಯಿಂದ ಸತ್ತವರ ಕುಟುಂಬಕ್ಕೆ ಕನಿಷ್ಟ ೨೦ ಸಾವಿರ ರೂಪಾಯಿಗಳನ್ನಾದರೂ ಪರಿಹಾರ ಧನವಾಗಿ ಕೊಡುವ ಬಗ್ಗೆ ಮಾನ್ಯ ಸಚಿವರು ಪರಿಶೀಲಿಸಬೇಕೆಂ ಎಂದು ವಿನಂತಿಸಿಕೊಳ್ಳುತ್ತೇವೆ.

ಶ್ರೀ ಕೆ. ಎಚ್. ರಂಗನಾಥ್.— ಪರಿಶೀಲನೆ ಮಾಡುತ್ತೇನೆ.